ಹೊಂದುವುದಕ್ಕಾಗಿ ಷರತ್ತನ್ನು ವಿಧಿಸಲಾಗುತ್ತಿದೆ. ಇತರೆ ಸಹಕಾರಿಗಳಿಗೆ ಸಂಬಂಧಿಸಿದಂತೆ ಸಹಕಾರಿಯ ಉದ್ದೇಶ, ಸಹಕಾರಿಯು ರಚಿತವಾಗುತ್ತಿರುವ ಸ್ಥಳದ ಭೌಗೋಳಿಕ ಸನ್ನಿವೇಶ ಇತ್ಯಾದಿ ಪರಿಗಣಿಸಿ ಷೇರು ಮತ್ತು ಸದಸ್ಯರ ಸಂಖ್ಯೆಯನ್ನು ನಿಗದಿಪಡಿಸಿ ಮುಖ್ಯ ಪ್ರವರ್ತಕರಿಗೆ ಅನುಮತಿ ನೀಡಲಾಗುತ್ತಿದೆ.

ಅ) ಹೌದು

ಇ) ಸೌಹಾರ್ದ ಸಹಕಾರಿಗಳು ಸ್ವಸಹಾಯ ಮತ್ತು ಪರಸ್ಪರ ನೆರವಿನ ಆಧಾರಿತವಾದ ಸ್ಪರ್ಧಾತ್ಮಕ, ಸ್ವಾವಲಂಬಿ ಆರ್ಥಿಕ ಉದ್ಯಮಗಳಾಗಿದ್ದು ಹಾಗೂ ಖಾಸಗಿ ಸಂಸ್ಥೆಗಳೊಂದಿಗೆ ಸ್ಪರ್ಧಿಸಬೇಕಾಗಿರುವುದರಿಂದ ಸೌಹಾರ್ದ ಪತ್ತಿನ ಸಹಕಾರಿಗಳಿಗೆ ಬಂಡವಾಳ ಮತ್ತು ಸದಸ್ಯರ ಸಂಖ್ಯೆ ಅತ್ಯಾವಶ್ಯಕವಾಗಿರುತ್ತದೆ. ಸೌಹಾರ್ದ ಕಾಯ್ದೆ ಕಲಂ 2(ಡಿ) ನ "ಮುಖ್ಯ ಪ್ರವರ್ತಕ" ಪರಿಭಾಷೆಯಲ್ಲಿ ನಿಬಂಧಕರಿಂದ ಸಹಕಾರಿಯ ನೋಂದಣಿಯಾಗುವ ಮೊದಲು ಪ್ರಾರಂಭಿಕ ಷೇರು ಬಂಡವಾಳ ಸಂಗ್ರಹಿಸಲು ಪ್ರಾಧಿಕೃತನಾದ ವ್ಯಕ್ತಿ ಎಂದಿರುತ್ತದೆ, ಇದರಂತೆ ಸಹಕಾರಿಗಳ ನೋಂದಣಿ ಪೂರ್ವದಲ್ಲಿ ಮುಖ್ಯ ಪ್ರವರ್ತಕರಿಗೆ ಅನುಮತಿ ನೀಡಲಾಗುತ್ತಿದೆ. ಕೆಲವೊಂದು ಸಂದರ್ಭಗಳಲ್ಲಿ ಸಹಕಾರಿ ರಚನೆಯಾಗುತ್ತಿರುವ ಭೌಗೋಳಿಕ ಸನ್ನಿವೇಶ, ಸದಸ್ಯರ ಆರ್ಥಿಕ ಶಕ್ತಿಯನ್ನು ಪರಿಗಣಿಸಿ ಷರತ್ತನ್ನು ಸಡಿಲಗೊಳಿಸಿ ಸಹಕಾರಿಗಳನ್ನು ನೋಂದಣಿ ಮಾಡಲಾಗುತ್ತಿದೆ.

ಈ) ನಿಬಂಧಕರ ನಿರ್ಧಾರ ಸಹಕಾರಿಗಳಿಗೆ ಅನುಕೂಲಕವಾಗಿದ್ದು, ಸೌಹಾರ್ದ ಸಹಕಾರಿ ಮೂಲಕ ತತ್ವಗಳಿಗೆ ವಿರುದ್ಧವಾಗಿರುವುದಿಲ್ಲ. ಆದುದರಿಂದ ನಿಬಂಧಕರ ನಿರ್ಧಾರ ಸರಿಯಾಗಿರುತ್ತದೆ.

ಯಲ್ಲದಬಾಣಿ ಬಳಿ ಹೇಮಾವತಿ ಮುಖ್ಯ ಕಾಲುವೆಗೆ ತೂಬು ಅಳವಡಿಸುವುದು

1681 (2262) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) - ಮಾನ್ಯ ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ಹೇಮಾವತಿ ಮುಖ್ಯ ಕಾಲುವೆಯ (ಕಡಬಾ ಸಬ್ ಡಿವಿಷನ್‌ಗೆ ಸೇರಿದ ಗುಬ್ಬಿ ಡಿವಿಜನ್) 59ನೇ ಕಿಲೋಮೀಟರ್‌ನ ಯಲ್ಲದಬಾಗಿ ಬಳಿ ತೂಬು ಇಡಲು ರೈತರ ಬೇಡಿಕೆ ಇದೆಯೇ ;

ಆ) ಸಂಪಿಗೆ ಕೆರೆ ಹಾಗೂ ಸುತ್ತಮುತ್ತಲ ಜನ ಜಾನುವಾರುಗಳಿಗೆ ಕುಡಿಯುವ ನೀರಿಗೆ ಅನುಕೂಲವಾಗುವುದೇ ;

ಇ) ಇಲ್ಲಿ ತೂಬನ್ನು ಇಟ್ಟರೆ ಈ ಭಾಗದ ಹತ್ತಾರು ಹಳ್ಳಿಗಳಿಗೆ ಅಂತರ್ಜಲ ಅಭಿವೃದ್ಧಿಯಾಗುವುದೇ ;

ಈ) ತಕ್ಷಣ ತೂಬು ಇಟ್ಟು ರೈತರಿಗೆ ಅನುಕೂಲ ಮಾಡಿಕೊಡಲಾಗುವುದೇ ;

ಉ) ಯಾವಾಗ ಮಾಡಲಾಗುವುದು ?

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಈ ಬಗ್ಗೆ ಮುಖ್ಯ ಇಂಜಿನಿಯರ್, ಹೇಮಾವತಿ ನಾಲಾ ವಲಯ, ತುಮಕೂರುರವರಿಗೆ ಮನವಿ ಬಂದಿದ್ದು, ಪರಿಶೀಲಿಸಿ ಸೂಕ್ತ ಕ್ರಮ ಜರುಗಿಸಲಾಗುವುದು.

ಆ) ಅನುಮೋದಿತ ಯೋಜನಾ ವರದಿಯಲ್ಲಿ ಸಂಪಿಗೆ ಕೆರೆಗೆ ನೀರೊದಗಿಸುವ ಯೋಜನೆ ಇರುವುದಿಲ್ಲ.

ಜನಜಾನುವಾರುಗಳ ಕುಡಿಯುವ ನೀರಿನ ಅನುಕೂಲಕ್ಕಾಗಿ ರೈತರು ಕೋರಿರುವ ಮನವಿಯನ್ನು ಪರಿಶೀಲಿಸಲಾಗುತ್ತಿದೆ.

ಇ) ವಿವರವಾದ ಸರ್ವೆ ಕಾರ್ಯಗಳನ್ನು ಮುಗಿಸಿದ ನಂತರ ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸಲಾಗುವುದು.

ಈ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಉ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಯಲಹಂಕ ನಾಲ್ಕನೇ ಹಂತದಲ್ಲಿ ಸಹಕಾರ ಬ್ಯಾಂಕು ಸ್ಥಾಪನೆ

1682 (1559) ಶ್ರೀ ಪಾಟೀಲ್ ಜೆ.ಟಿ. (ಬೀಳಗಿ) - ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ಯಲಹಂಕ ನಾಲ್ಕನೇ ಹಂತದಲ್ಲಿ ಸುಮಾರು ಐದು ಸಾವಿರ ಕುಟುಂಬಗಳು ವಾಸಿಸುತ್ತಿದ್ದು, ಬ್ಯಾಂಕ್ ಸೌಲಭ್ಯದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಸಹಕಾರಿ ಬ್ಯಾಂಕ್‌ವೊಂದನ್ನು ಇಲ್ಲಿ ಸ್ಥಾಪಿಸಲು ಪರಿಶೀಲಿಸಲಾಗುವುದೆ?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು):

ಅ) ಬಂದಿರುವುದಿಲ್ಲ

ಆ) ಉದ್ಭವಿಸುವುದಿಲ್ಲ. ಆದಾಗ್ಯೂ ಈ ವ್ಯಾಪ್ತಿಯನ್ನು ಒಳಗೊಂಡಂತೆ ನಂ. 689 ಎಂ.ಐ.ಜಿ, ಏ ಸೆಕ್ಟರ್, 3ನೇ 'ಎ' ಕ್ರಾಸ್ ಯಲಹಂಕ ನ್ಯೂ ಟೌನ್, ಬೆಂಗಳೂರು 64 ಈ ವಿಳಾಸದಲ್ಲಿ "ಅರುಣಾ ಸಹಕಾರ ಬ್ಯಾಂಕ್" ಕಾರ್ಯನಿರ್ವಹಿಸುತ್ತಿದೆ. ಇದರ ಕಾರ್ಯವ್ಯಾಪ್ತಿಯು ಬೆಂಗಳೂರು ನಗರ ಜಿಲ್ಲೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ವ್ಯಾಪ್ತಿಯನ್ನು ಹೊಂದಿರುತ್ತದೆ. ಇದರ ಜೊತೆಗೆ ಈ ವ್ಯಾಪ್ತಿಯಲ್ಲಿ ಬೆಂಗಳೂರು ನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಹಕಾರ ಕೇಂದ್ರ ಬ್ಯಾಂಕಿನ ಶಾಖೆ ಹಾಗೂ ಭಾರತ್ ಕೋ ಆಪರೇಟಿವ್ ಬ್ಯಾಂಕಿನ ಶಾಖೆಯು ಇರುತ್ತದೆ. ಒಂದು ವೇಳೆ ಯಲಹಂಕ 4ನೇ ಹಂತದಲ್ಲಿ ಸಹಕಾರ ಸಂಘ : ಬ್ಯಾಂಕನ್ನು ಸ್ಥಾಪಿಸಲು ಸದಸ್ಯರು ಮುಂದೆ ಬಂದಲ್ಲಿ ಸಹಕಾರ ಸಂಘಗಳ ಕಾಯ್ದೆ ನಿಯಮಗಳ ಅವಕಾಶಗಳಿಗೆ ಅನುಗುಣವಾಗಿ ಪರಿಶೀಲಿಸಿ ಕ್ರಮವಿಡಲಾಗುವುದು.

ರಾಜ್ಯದಲ್ಲಿ ಕಳಪೆ ಸೂರ್ಯಕಾಂತಿ ಬೀಜ ಪೂರೈಕೆ

1683 (1798) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) - ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :-

ಅ) ರಾಜ್ಯದಲ್ಲಿ ಕಳೆದ ವರ್ಷ ಕಳಪೆ ಸೂರ್ಯಕಾಂತಿ ಬೀಜಗಳನ್ನು ಪೂರೈಸಲಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಕುಷ್ಟಗಿ ತಾಲ್ಲೂಕು ತಳವೆಗೇರಾ ರೈತರಿಗೆ ಸೂರ್ಯಪಾನ ಕಳಪೆ ಬೀಜ ನೀಡಲಾಗಿದ್ದುದನ್ನು ಸರ್ಕಾರಕ್ಕೆ ಕೃಷಿ ಅಧಿಕಾರಿಗಳು ತಿಳಿಸಿರುತ್ತಾರೆಯೇ ;

ಇ) ಹಾಗಾದರೆ, ರೈತರು ಬೀಜ ಮಾರಾಟ ಮಾಡಿದವರ ವಿರುದ್ಧ, ಅಧಿಕಾರಿಗಳ ವಿರುದ್ಧ ಧರಣಿ ನಡೆಸಿದ ವಿಷಯವಾಗಿ ಸರ್ಕಾರ ಏನು ಕ್ರಮಕೈಗೊಂಡಿದೆ ;

ಈ) ಕಳಪೆ ಬೀಜ ಪಡೆದ ಬಿತ್ತನೆ ಕೈಗೊಂಡು ಹಾನಿಗೊಳಗಾಗಿರುವಂತಹ ರೈತರಿಗೆ ಸರ್ಕಾರ ಏನು ಪರಿಹಾರ ನೀಡಿದೆ ಹಾಗೂ ಪೂರೈಕೆದಾರರ ವಿರುದ್ಧ ಏನು ಕಟ್ಟುನಿಟ್ಟಿನ ಕ್ರಮ ಜರುಗಿಸಿದೆ?